O.S. NO. 264/2023

PW -2 .

Dated 20-09-2025

ಸಾಕ್ಷಿಯನ್ನು ಈ ದಿನ ದಿನಾಂಕ 20-09-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರವಾಗಿ ಶ್ರೀ ಎಸ್ ವಿ ಎಸ್ ವಕೀಲರಿಂದಃ

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಕುರಿತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಕುರಿತು ಸಲ್ಲಿಸಿರುತ್ತೇನೆ, ಅದರಲ್ಲಿ ಬರೆದಿರುವ ಎಲ್ಲ ಸಂಗತಿಗಳು ನನ್ನ ಜ್ಞಾನ ಮತ್ತು ತಿಳುವಳಿಕೆ ಮೇರೆಗೆ ನಿಜ ಇದ್ದು , ಅದರಲ್ಲಿರುವ ಸಹಿ ನಾನೇ ಮಾಡಿರುತ್ತೇನೆ.

ಪಾಟೀ ಸವಾಲುಃ 2ನೇ ಪ್ರತಿವಾದಿ ಪರವಾಗಿ ಶ್ರೀ ಎಸ್ ವಾಯ್ ಪಿ ವಕೀಲರಿಂದ

1 ಮತ್ತು 2 ನೇ ಪ್ರತಿವಾದಿಗಳ ಮದುವೆ ಕಾಲಕ್ಕೆ ನಾನು ಹಾಜರು ಇದ್ದೇನು. ಅವರ ಮದುವೆ ಆಗಿ 30-31 ವರ್ಷಗಳು ಆಗಿರುತ್ತವೆ. ಅವರ ಮದುವೆ ನಿಚ್ಚಣಕಿ ಗ್ರಾಮದ ಮಡಿವಾಳೇಶ್ವರ ಮಠದಲ್ಲಿ ಆಗಿರುತ್ತದೆ. ಅವರ ಮದುವೆಯಲ್ಲಿ ಗಣ್ಯವ್ಯಕ್ತಿಗಳಾದ ಲಿಂಗಪ್ರಕಾಶ ಮಲ್ಲೇಶಪ್ಪ ವಾಲಿ, ಗಂಗಪ್ಪ ಕುರುಬರ ಸಾ. ಗುಡದೂರ, ಖೊದಾನಪೂರ ಗ್ರಾಮದ ಗೌಡರ ಮತ್ತು ನಾನು ಸಹ ಹಾಜರಿದ್ದೇವು. 1 ಮತ್ತು 2 ಪ್ರತಿವಾದಿಗಳಿಗೆ ಮಂಜುನಾಥ ಎಂಬ ಮಗ ಜನಿಸಿರುತ್ತಾನೆ. ಪ್ರಸ್ತುತ ದಾವೆಯನ್ನು ಯಾರ ಯಾರ ಮೇಲೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆ ಮಂಜುನಾಥ 1 ನೇ ಪ್ರತಿವಾದಿ ವೀರಭದ್ರಪ್ಪ ಮೇಲೆ ಮಾಡಿರುತ್ತಾರೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಗಳಿಗೆ ವಾದಿ ಒಬ್ಬನೇ ಮಗ ಜನಿಸಿರುತ್ತಾನೆ ಎಂದರೆ ಸರಿ. ವಾದಿಯು 1 ನೇ ಪ್ರತಿವಾದಿಯ ಆಸ್ತಿಗಳಲ್ಲಿ ಹಿಸ್ಸೆ ಬೇಕು ಎಂದು ಪ್ರಸ್ತುತ ದಾವೆ ಮಾಡಿರುತ್ತಾನೆ ಎಂದರೆ ಸರಿ.

O.S. NO. 264/2023
PW -2 .
Dated 20-09-2025

ಪಾಟಿ ಸವಾಲುಃ 1, 3 ಮತ್ತು 4 ನೇ ಪ್ರತಿವಾದಿಗಳ ವಕೀಲರು ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು .

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.